ನಿಮ್ಮೊಡನೆ

# ವಿಕೃತ ನೀಲಿಚಿತ್ರಗಳ ಹಾವಳಿ

ಅಶ್ಲೀಲ, ವಿಕೃತ ಕಾಮದ ನೀಲಿಚಿತ್ರಗಳು ಕಾಳಸಂತೆಯಲ್ಲಿ ಸುಲಭವಾಗಿ ಸಿಗುತ್ತಿರುವುದು ಆತಂಕ ಹುಟ್ಟಿಸುವ ಸಂಗತಿ. ಅದರಲ್ಲೂ ಹೈಸ್ಕೂಲ್, ಪಿಯು ಮಟ್ಟದಲ್ಲೇ ವಿದ್ಯಾರ್ಥಿಗಳ ಈ ದುಶ್ಚಟಕ್ಕೆ ಬಲಿಯಾಗುತ್ತಿದ್ದಾರೆ. ಇಂತಹ ನೀಲಿಚಿತ್ರಗಳನ್ನು ನಿರ್ಬಂಧಿಸುವ ತಂತ್ರಜ್ಞಾನವನ್ನು ಹಾಗೂ ಇವುಗಳ ಮಾರಾಟ ಜಾಲವನ್ನು ಹತ್ತಿಕ್ಕುವ ಕಾನೂನುಕ್ರಮಗಳನ್ನು ಸರಕಾರ ತುರ್ತಾಗಿ ಕೈಗೊಳ್ಳಬೇಕಿದೆ.

ಮೊಬೈಲ್ ಜನಜೀವನದ ಅವಿಭಾಜ್ಯ ಅಂಗವಾಗಿಬಿಟ್ಟಿದೆ. ಹೈಸ್ಕೂಲ್ ಮೆಟ್ಟಿಲು ಹತ್ತುವಷ್ಟರಲ್ಲೇ ಮಕ್ಕಳ ಕೈಗೆ ಮೊಬೈಲ್ ಕೊಡುವ ಪರಿಪಾಠ ಶುರುವಾಗಿದೆ. ದೊಡ್ಡ ನಗರಗಳಲ್ಲಿ ಪೋಷಕರ ದುಡಿತದ ಅವಧಿ ಮತ್ತು ಮಕ್ಕಳ ಸ್ಕೂಲ್ ವೇಳಾಪಟ್ಟಿಯ ಮಧ್ಯೆ ಸಂವಹನ ಸಾಧಿಸಲು ಮೊಬೈಲ್ ಅಗತ್ಯವಿದೆ ಎನ್ನುವುದನ್ನು ಸ್ವಲ್ಪ ಮಟ್ಟಿಗೆ ಒಪ್ಪಬಹುದು. ಆದರೆ ಅಂತಹ ಅನಿವಾರ್ಯತೆ ಇಲ್ಲದ ಪೋಷಕರೂ ಮಕ್ಕಳ ಕೈಗೆ ಮೊಬೈಲ್ ಕೊಡುತ್ತಿದ್ದಾರೆ. ಅದೂ ಅಲ್ಲದೆ, ಈಗ ಮೊಬೈಲ್ ಎಂದರೆ ಕೇವಲ ಕರೆ ಮಾಡುವ, ಸ್ವೀಕರಿಸುವ ಯಂತ್ರವಲ್ಲ. ಮೊಬೈಲ್ ಮೂಲಕ ಅಂತರ್ಜಾಲ ಸಂಪರ್ಕ ಸಾಧಿಸುವವರ ಸಂಖ್ಯೆಯೂ ವೇಗವಾಗಿ ಬೆಳೆಯುತ್ತಿದೆ. ಅದು ಅಂಗೈಯಲ್ಲೇ ಪುಟ್ಟ ಜಗತ್ತು. ಇನ್ನೂ ಜಗತ್ತನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವಿಲ್ಲದ ಎಳೆಯರು ಮೊಬೈಲ್‌ಗಳ ಮೂಲಕ ದಾರಿ ತಪ್ಪುವಂತೆ ಮಾಡುವುದು ಸುಲಭ. ಅಪ್ರಾಪ್ತ ವಯಸ್ಸಿನ ಪ್ರೇಮ– ಕಾಮಗಳ ಇಂತಹ ನೂರೆಂಟು ಪ್ರಕರಣಗಳು ನಗರಗಳಲ್ಲಿ ಪದೇ ಪದೇ ವರದಿಯಾಗುತ್ತಿವೆ. ಅದರಲ್ಲೂ ಇತ್ತೀಚೆಗೆ ಅಶ್ಲೀಲ, ಲೈಂಗಿಕ ಕ್ರಿಯೆಗಳ ನೀಲಿ ಚಿತ್ರಗಳು ಮೊಬೈಲ್ ಮೂಲಕ ಹರಿದಾಡುವುದು ಹೆಚ್ಚಾಗುತ್ತಿದೆ. ಇಂತಹ ವಿಕೃತ ಚಿತ್ರಗಳನ್ನು ವೀಕ್ಷಿಸುವ ಯುವಜನತೆ ಹಾದಿ ತಪ್ಪಿ ಕ್ರಿಮಿನಲ್ ಕೃತ್ಯಗಳಲ್ಲಿ ತೊಡಗುವುದೂ ಹೆಚ್ಚಾಗಿದೆ.

'ರೆಸ್ಕ್ಯೂ' ಎನ್ನುವ ಎನ್‌ಜಿಓ ಇತ್ತೀಚೆಗೆ ಪ್ರಕಟಿಸಿರುವ ಸಮೀಕ್ಷಾ ವರದಿ ಗಾಬರಿ ಹುಟ್ಟಿಸುವಂತಿದೆ. 'ಬೆಂಗಳೂರಿನಲ್ಲಿ 430 ಪದವಿ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಮಾಹಿತಿಯ ಪ್ರಕಾರ ಪದವಿ ವಿದ್ಯಾರ್ಥಿಗಳು ಸರಾಸರಿ ಪ್ರತಿದಿನ ಒಂದು ಗಂಟೆಯ ಕಾಲ ಅಶ್ಲೀಲ ಚಿತ್ರಗಳನ್ನು ಅಂತರ್ಜಾಲದಲ್ಲಿ ವೀಕ್ಷಿಸುತ್ತಿದ್ದಾರೆ. ಎಸ್ಸೆಸ್ಸೆಲ್ಸಿ ಮತ್ತು ಪಿಯು ತರಗತಿಯಲ್ಲಿ ಇರುವಾಗಲೇ ಹುಡುಗ– ಹುಡುಗಿಯರು ಅಶ್ಲೀಲ ಚಿತ್ರಗಳ ವೀಕ್ಷಣೆ ಆರಂಭಿಸುತ್ತಿದ್ದಾರೆ. ಒಂದು ಜಿಬಿ ಯಿಂದ 8 ಜಿಬಿ ವರೆಗಿನ ಸಾಮರ್ಥ್ಯದ, ಅಗ್ಗದ ಮೆಮೊರಿ ಚಿಪ್‌ಗಳಲ್ಲಿ ನೀಲಿಚಿತ್ರಗಳು ಕಾಳಸಂತೆಯಲ್ಲಿ ಸುಲಭವಾಗಿ ಲಭ್ಯವಾಗುತ್ತಿದೆ. ಇದರಿಂದಾಗಿ ಗ್ರಾಮೀಣ ಪ್ರದೇಶಗಳಲ್ಲೂ ಅಶ್ಲೀಲ ಚಿತ್ರವೀಕ್ಷಣೆಯ ಚಟ ಬೆಳೆಯುತ್ತಿದೆ' ಎಂದು ಈ ಸಮೀಕ್ಷೆ ಬಹಿರಂಗಪಡಿಸಿದೆ. 2.4 ಕೋಟಿಗೂ ಹೆಚ್ಚು ಅಶ್ಲೀಲ ವೆಬ್‌ಸೈಟ್‌ಗಳು ಅಂತರ್ಜಾಲದಲ್ಲಿ ಲಭ್ಯವಿರುವುದನ್ನೂ ಈ ಸಮೀಕ್ಷೆ ಬಹಿರಂಗಪಡಿಸಿದೆ.

ದೇಶದೆಲ್ಲೆಡೆ ಇತ್ತೀಚೆಗೆ ಮಹಿಳೆಯರ ಮೇಲೆ ಅತ್ಯಾಚಾರದ ಪ್ರಕರಣಗಳು ಮತ್ತು ಯುವತಿಯರ ಕಳ್ಳಸಾಗಣೆ ಪ್ರಕರಣಗಳು ಹೆಚ್ಚಾಗಿರುವುದಕ್ಕೂ ಈ ಅಶ್ಲೀಲ ಚಿತ್ರವೀಕ್ಷಣೆಯ ಚಟ ಬೆಳೆದಿರುವುದಕ್ಕೂ ನಿಕಟ ಸಂಬಂಧವಿದೆ. ಗಂಡಸರನ್ನು ಅಭಿರುಚಿಹೀನಗೊಳಿಸಿ, ಅವರ ಮನಸುಗಳನ್ನು ವಿಕೃತಗೊಳಿಸುವ ಪ್ರಕ್ರಿಯೆಗೆ ಈ ನೀಲಿಚಿತ್ರಗಳ ವೀಕ್ಷಣೆ ಕುಮ್ಮಕ್ಕು ನೀಡುವುದು ಸುಳ್ಳಲ್ಲ. ಅದಕ್ಕಿಂತ ಮುಖ್ಯವಾಗಿ ಎಳೆಯ ಮಕ್ಕಳ ಮೇಲೆ ಇಂತಹ ವಿಕೃತಕಾಮದ ನೀಲಿಚಿತ್ರಗಳು ಬೀರುವ ದುಷ್ಪರಿಣಾಮ ಆತಂಕ ಹುಟ್ಟಿಸುವಂತಹದ್ದು. ಕಾಳಸಂತೆಯಲ್ಲಿ ಸಿಗುವ ಅಗ್ಗದ ಮೆಮೊರಿ ಚಿಪ್‌ಗಳಲ್ಲಿ ಅಪ್ರಾಪ್ತರ ಮೇಲೆ ಲೈಂಗಿಕ ದೌರ್ಜನ್ಯ ನಡೆಸುವ, ಗ್ಯಾಂಗ್‌ರೇಪ್ ಮಾಡುವಂತಹ ದೃಶ್ಯಗಳೂ ಹೇರಳವಾಗಿವೆ ಎಂದು ಸಮೀಕ್ಷೆ ತಿಳಿಸಿರುವುದು ಖಂಡಿತವಾಗಿಯೂ ಸರಕಾರ ಗಂಭೀರವಾಗಿ ಪರಿಗಣಿಸಬೇಕಾದ ಸಂಗತಿಯಾಗಿದೆ.

ಚೀನಾ, ಸೌದಿ ಅರೇಬಿಯಾ, ಸಿಂಗಾಪುರ ಮುಂತಾದ ದೇಶಗಳಲ್ಲಿ ಇಂತಹ ನೀಲಿ ಚಿತ್ರಗಳ ವೆಬ್ ಸೈಟ್‌ಗಳನ್ನು ನಿರ್ಬಂಧಿಸುವ ತಂತ್ರಜ್ಞಾನ ಲಭ್ಯವಿದ್ದು, ಅಶ್ಲೀಲ ಚಿತ್ರಗಳ ಹಾವಳಿಯನ್ನು ತಡೆಯಲು ಕಠಿಣ ಕಾನೂನುಗಳನ್ನೂ ಜಾರಿಗೊಳಿಸಲಾಗಿದೆ. ಆದರೆ ನಮ್ಮಲ್ಲಿ ಅಂತಹ ನಿರ್ಬಂಧದ ತಂತ್ರಜ್ಞಾನ ಬಳಕೆಯಾಗುತ್ತಿಲ್ಲ. ಯುವಜನರು ದಾರಿ ತಪ್ಪಿಹೋಗದಂತೆ ತಡೆಯುವಲ್ಲಿ ಇಂತಹ ಕಾನೂನುಗಳ ಪಾತ್ರ ಮಹತ್ವದ್ದು. ಸಾಮಾಜಿಕ ಜಾಲತಾಣಗಳಲ್ಲಿ ರಾಜಕೀಯ ಘಟನೆಗಳಿಗೆ ಅಥವಾ ಕ್ರಮಗಳಿಗೆ ಪ್ರತಿಕ್ರಿಯೆ ನೀಡುವವರ ವಿರುದ್ಧ ದೂರು ಬಂದ ತಕ್ಷಣ ಬಂಧಿಸಿ ಕೇಸು ದಾಖಲಿಸುವ ಪೊಲೀಸರು, ಇಂತಹ ಅಶ್ಲೀಲ ನೀಲಿ ಚಿತ್ರಗಳು ಮೊಬೈಲ್‌ಗಳ ಮೂಲಕ ಎಲ್ಲೆಡೆ ಹರಿದಾಡುವುದನ್ನು ತಡೆಯಲು ಯಾವ ಕ್ರಮವನ್ನೂ ಕೈಗೊಂಡಂತೆ ಕಾಣುವುದಿಲ್ಲ. ಹದಿಹರೆಯದ ಮನಸ್ಸುಗಳನ್ನು ಭ್ರಷ್ಟಗೊಳಿಸುವ, ವಿಕೃತ ಲೈಂಗಿಕತೆಯನ್ನು ಪ್ರಸಾರ ಮಾಡುವ ನೀಲಿಚಿತ್ರಗಳ ವೆಬ್‌ಸೈಟ್‌ಗಳನ್ನು ನಿರ್ಬಂಧಿಸುವ ತಂತ್ರಜ್ಞಾನದ ಪರಿಣಾಮಕಾರಿ ಬಳಕೆ ಆಗಬೇಕಿದೆ. ಜತೆಗೇ ಶಾಲಾ, ಕಾಲೇಜುಗಳಲ್ಲಿ ಆರೋಗ್ಯಕರ ಲೈಂಗಿಕ ಮನೋಭಾವವನ್ನು ಬೆಳೆಸುವುದಕ್ಕೆ ಪೂರಕವಾದ ಪಠ್ಯಕ್ರಮವನ್ನೂ ರೂಪಿಸಬೇಕಿದೆ. ಎಸ್ಸೆಸ್ಸೆಲ್ಸಿ, ಪಿಯುಸಿ ಹಂತದಲ್ಲಿ ಮಕ್ಕಳು ಇಂತಹ ಅನಾರೋಗ್ಯಕರ ಚಟಗಳಿಗೆ ಬಲಿ ಬಿದ್ದರೆ ಇಡೀ ಸಮಾಜದ ಮೇಲೆಯೇ ದುಷ್ಪರಿಣಾಮ ಉಂಟಾಗಲಿದೆ. ಈ ನಿಟ್ಟಿನಲ್ಲಿ ತಂತ್ರಜ್ಞಾನ ಮತ್ತು ಕಾನೂನಿನ ಪರಿಣಾಮಕಾರಿ ಸದ್ಬಳಕೆ ಆಗುವಂತೆ ಸರಕಾರ ತಕ್ಷಣ ಕ್ರಮಗಳನ್ನು ಕೈಗೊಳ್ಳಬೇಕಿದೆ.

■ ಬಿ.ಎಂ.ಹನೀಫ್




ದಿನು